185(369) ಶ್ರೀ ರಾಮರೆಡ್ಡಿ ಜಿ.ವಿ. (ಬಾಗೇಪಲ್ಲಿ): ಮಾನ್ಯ ಸಣ್ಣ ಕೈಗಾರಿಕಾ ಮತ್ತು ರೇಷ್ಮೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿನ ಬಹುತೇಕ ಸಣ್ಣ ಕೈಗಾರಿಕೆಗಳು ವಿದ್ಯುತ್ ಸರಬರಾಜು ಹಾಗೂ ಕಚ್ಚಾ ವಸ್ತುಗಳ ಕೊರತೆಯಿಂದಾಗಿ ಮುಚ್ಚುವ ಹಂತಕ್ಕೆ ತಲುಪಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದಲ್ಲಿ, ಇಂತಹ ಸಣ್ಣ ಕೈಗಾರಿಕೆಗಳನ್ನು ಪುನಃಶ್ಚೇತನಗೊಳಿಸಲು ಸರ್ಕಾರ ಸಂಕಲ್ಪಿಸಿದೆಯೇ;

ಇ) ಹಾಗಿದ್ದಲ್ಲಿ, ಸರ್ಕಾರ ಈ ಬಗ್ಗೆ ಕೈಗೊಂಡ ಕ್ರಮವೇನು?

ಶ್ರೀ ಕಟ್ಟಾ ಸುಬ್ರಮಣ್ಯನಾಯ್ಡು (ಸಣ್ಣ ಕೈಗಾರಿಕೆ ಮತ್ತು ರೇಷ್ಮ ಸಚಿವರು):

ಅ) 1. ವಿದ್ಯುತ್ ಅಭಾವ ಮತ್ತು ಗ್ರಾಮಾಂತರ ಪ್ರದೇಶದಲ್ಲಿ ವಿದ್ಯುತ್ ನಿಲುಗಡೆಯಿಂದ ಗ್ರಾಮಾಂತರ ಪದೇಶದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಕೈಗಾರಿಕಾ ಘಟಕಗಳು ತೊಂದರೆ ಅನುಭವಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆ.

2. ಜಾಗತೀಕರಣ ಮತ್ತು ಉದಾರೀಕರಣ ನೀತಿಯಿಂದ ಕೈಗಾರಿಕೆಗಳಿಗೆ ಅವಶ್ಯಕತೆಯಿರುವ ಕಚ್ಚಾಮಾಲು ಈಗ ಮುಕ್ತ ಮಾರುಕಟ್ಟೆಯಲ್ಲಿ ಸ್ಪರ್ಧಾತ್ಮಕ ಬೆಲೆಯಲ್ಲಿ ದೊರೆಯುವುದರಿಂದ, ಕಚ್ಚಾಮಾಲು ಕೊರತೆಯಿಂದಾಗಿ ಘಟಕವು ಮುಚ್ಚುವ ಪರಿಸ್ಥಿತಿ ಉದ್ಭವಿಸುವುದಿಲ್ಲ.

ಆ) ಹೌದು.

ಇ) ಹೆಚ್ಚಿನ ಕೈಗಾರಿಕೆಗಳು ಒಂದೇ ಪ್ರದೇಶದಲ್ಲಿದ್ದಲ್ಲಿ ಹೆಚ್ಚುವರಿಯಾಗಿದ್ದಲ್ಲಿ ಪ್ರತ್ಯೇಕ ಕೈಗಾರಿಕಾ ಫೀಡರ್ ಮುಖಾಂತರ ನಿರಂತರ ಗುಣಮಟ್ಟದ ವಿದ್ಯುತ್ ಸರಬರಾಜು ವ್ಯವಸ್ಥೆ ಮಾಡಬಹುದಾಗಿರುತ್ತದೆ. ಗ್ರಾಮಾಂತರ ಪ್ರದೇಶದಲ್ಲಿ, ಕೆ.ಐ.ಎ.ಡಿ.ಬಿ. ಮತ್ತು ಕೆ.ಎಸ್.ಎಸ್.ಐ.ಡಿ.ಸಿ. ರವರು ಅಭಿವೃದ್ಧಿ ಪಡಿಸಿದ ಕೈಗಾರಿಕಾ ಪ್ರದೇಶಗಳನ್ನು ಅಥವಾ ಕೈಗಾರಿಕಾ ವಸಾಹತುಗಳಲ್ಲಿ ಪ್ರತ್ಯೇಕ ಕೈಗಾರಿಕಾ ಫೀಡರ್ ಮುಖಾಂತರ ನಿರಂತರ ಗುಣಮಟ್ಟದ ವಿದ್ಯುತ್ ಸರಬರಾಜನ್ನು ಮಾಡಬಹುದು. ಇಂತಹ ಪ್ರದೇಶಗಳಲ್ಲಿ ಸದರಿ ವ್ಯವಸ್ಥೆಯನ್ನು ಈಗಾಗಲೆ ಅಳವಡಿಕೆಯಿಂದ ವಿದ್ಯುತ್ ಅಭಾವದ ಕೊರತೆಯನ್ನು ನಿವಾರಣೆಗೊಳಿಸ ಬಹುದಾಗಿರುತ್ತದೆ.

186(370) ಶ್ರೀ ಶ್ರೀರಾಮರೆಡ್ಡಿ ಜಿ.ವಿ. (ಬಾಗೇಪಲ್ಲಿ): ಮಾನ್ಯ ಉಪ ಮುಖ್ಯಮಂತ್ರಿಗಳು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿನ ಅಬ್ಕಾರಿ ಗುತ್ತಿಗೆದಾರರಿಂದ ಸರ್ಕಾರಕ್ಕೆ ಬರಬೇಕಾಗಿರುವ ತೆರಿಗೆ ಬಾಕಿ ಹಣ ಎಷ್ಟು (ವಿವರ ಒದಗಿಸುವುದು):

ಆ) ಈ ಬಾಕಿ ಹಣ ವಸೂಲಿ ಮಾಡಲು ಸರ್ಕಾರ ಕೈಗೊಂಡ ಕ್ರಮವೇನು?

ಶ್ರೀ ಬಿ.ಎಸ್. ಯಡಿಯೂರಪ್ಪ (ಉಪ ಮುಖ್ಯಮಂತ್ರಿಗಳು):

ಅ) ದಿನಾಂಕ 31-03-2005ರ ಅಂತ್ಯಕ್ಕೆ ರೂ.667.70 ಕೋಟಿಗಳು ಅಬ್ಕಾರಿ ಗುತ್ತಿಗೆದಾರರಿಂದ ಬಾಕಿ ಇರುತ್ತದೆ. ಜಿಲ್ಲಾವಾರು ವಿವರಗಳನ್ನು ಅನುಬಂಧ-1ರಲ್ಲಿ ಒದಗಿಸಲಾಗಿದೆ.

ಆ) ಇಲಾಖೆಯ ಮೂಲಕ ಬಾಕಿಯನ್ನು ವಸೂಲಿ ಮಾಡಲು ಕ್ರಮ ಕೈಗೊಳ್ಳಲಾಗಿದೆ. ಅಲ್ಲದೆ, ಅಬಕಾರಿ ಬಾಕಿಯನ್ನು ಭೂ ಕಂದಾಯ ಕಾಯ್ದೆಯಡಿಯಲ್ಲಿ ಭೂ ಕಂದಾಯ ಬಾಕಿಯೆಂದು ಪರಿಗಣಿಸಿ ವಸೂಲಿ ಮಾಡಲು ಕ್ರಮಕೈಗೊಳ್ಳಲಾಗಿದೆ. ಇದರೊಂದಿಗೆ ಕರಸಮಾಧಾನ ಯೋಜನೆಯನ್ನು ಜಾರಿಗೆ ತಂದು ಪೂರ್ತಿ ಅಸಲು ಸಂದಾಯ ಮಾಡಿದವರಿಗೆ ಬಡ್ಡಿ ಮನ್ನಾ ಮಾಡುವ ಬಗ್ಗೆ ಕ್ರಮ ವಹಿಸಲಾಗುತ್ತಿದೆ.

DISTRICTWISE ARREARS LIST

(Rs.in crores)

Sl. No.	DISTRICT	TOTAL PRI	TOTAL INT	GRAND TOTAL
1.	BANGALORE (U)	4832.9	10730.60	15622.88
2.	BANGALORE (R)	2309.73	1567.47	3607.20
3.	BAGALKOTE	661.34	446.41	1260.75
4.	BELGAUM	696.64	1176.88	1875.52
5.	BELLARY	1220.24	998.08	2218.42
6.	BIDAR	184.43	192.99	377.42
7.	BIJAPUR	785.88	552.87	1338.85
8.	CHAMARAJNAGARA	1890.44	769.33	265.77
9.	CHIKMAGAIUR	890.96	738.33	1628.61
10.	CHITRADURGA	690.05	738.33	1628.39
11.	D'KANNADA	1617.53	4346.54	5694.07
12.	DAVANGERE	205.74	421.79	627.53
13.	DHARAWAD	258.94	377.44	636.39
14.	GADAG	160.29	221.71	382.00
15.	GULBARGA	2052.25	2041.07	4093.32
16.	HASSAN	627.12	827.07	1454.19
17.	HAVERI	65.00	226.77	291.77
18.	KODAGU	402.46	739.61	1142.07
19.	KOLAR	478.48	630.57	1109.05
20.	KOPPALA	194.92	376.89	571.81
21.	MANDYA	1938.03	2162.09	4100.11
22.	MYSORE	2563.77	2263.52	4827.29
23.	RAICHUR	672.35	537.76	1210.11
24.	SHIMOGA	980.32	769.92	1750.24
25.	TUMKUR	1056.10	769.29	1825.39
26.	UDUPI	1326.37	3144.87	4471.24
27.	U'KANNADA	80.39	364.45	444.84
	TOTAL:	**28547.07**	**38222.96**	**66770.03**

187(436) ಶ್ರೀ ವೈಜ್ಯನಾಥ ಪಾಟೀಲ್ (ಚಿಂಚೋಳಿ): ಮಾನ್ಯ ಉಪ ಮುಖ್ಯಮಂತಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 2004 ನವೆಂಬರ್ ಮೊದಲನೆಯ ವಾರ ಮಾನ್ಯ ಮುಖ್ಯಮಂತ್ರಿಗಳು ಗುಲ್ಬರ್ಗಾದಲ್ಲಿ ಶಾಸಕರ, ಅಧಿಕಾರಿಗಳ ಸಭೆಯಲ್ಲಿ ಸುಮಾರು 500.00 ಕೋಟಿ ರೂಪಾಯಿಯ ಒಂದು ಪ್ಯಾಕೇಜ್ ಘೋಷಣೆ ಮಾಡಿರುವುದು ನಿಜವಲ್ಲವೆ;

ಆ) ಹಾಗಿದ್ದಲ್ಲಿ, ಈ ಪ್ಯಾಕೇಜ್ ಪ್ರಕಾರ ಎಷ್ಟು ಹಣ ಬಿಡುಗಡೆ ಮಾಡಲಾಗಿದೆ.

ಶ್ರೀ ಬಿ.ಎಸ್. ಯಡಿಯೂರಪ್ಪ (ಉಪ ಮುಖ್ಯಮಂತ್ರಿಯವರು):

ಅ) ನಿಜ.

ಆ) ಇದುರೆಗೂ ರೂ.30.71 ಕೋಟಿ ಬಿಡುಗಡೆಯಾಗಿರುತ್ತದೆ.